ದಿನಾಂಕ **06.12.2019** 4 ಓ ಎಸ್ . ನಂ. 128/2015

ಪಿ.ಡಬ್ಲ್ಯೂ.5

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಲ್.ಜಿ.ಜಿ ರವರಿಂದಃ-

ನಿಪಿ 3 ಷರಾವನ್ನು ತಯಾರಿಸಲು ನನಗೆ 1 ಮತ್ತು 2 ನೇ ಪ್ರತಿವಾದಿಗಳು ತಿಳಿಸಿದ್ದರು. 10 ಲಕ್ಷ ರೂ. ಗಳಿಗೆ ವ್ಯಾಪಾರ ಆಗಿದ್ದು, 8,50,000/- ರೂ. ಕೊಟ್ಟಿದ್ದಾರೆ ಮತ್ತು ಉಳಿಕೆ 1 ವರೆ ಲಕ್ಷ ರೂ. ಕೊಡಬೇಕಾಗಿದೆ ಎಂದು ಹೇಳಿ ಷರಾ ಬರೆಯಲು ತಿಳಿಸಿದ್ದರು. ನಾನು ಮೂಲ ನೊಂದಾಯಿತ ಕ್ರಯದ ಕರಾರು ನೋಡಿದ್ದೇನೆ ಅದರಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸಹಿ ಮಾಡಿದ್ದಾರೆ ಎಂದರೆ ಸರಿ. ನಿಪಿ 3 ರಲ್ಲಿರುವ 1 ಮತ್ತು 2 ನೇ ಪ್ರತಿವಾದಿಗಳ ಸಹಿಗಳಿಗೂ ನಿಪಿ 1 ರಲ್ಲಿರುವ 1 ಮತ್ತು 2 ನೇ ಪ್ರತಿವಾದಿಗಳ ಸಹಿಗಳಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ವ್ಯತ್ಯಾಸ ಗುರುತಿಸಲು ನನಗೆ ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 3 ಮತ್ತು ನಿಪಿ 1 ರಲ್ಲಿರುವ ಪ್ರತಿವಾದಿಗಳ ಸಹಿಗಳಿಗೆ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಷರಾ ಬರೆಯುವಾಗ ನಾನು ನಿಪಿ 1 ಮತ್ತು 2 ನ್ನು ನೋಡಿದ್ದೆ. ಬೇರೆ ದಾಖಲೆಗಳನ್ನು ನನಗೆ ಕೊಟ್ಟಿರಲಿಲ್ಲ. ಯಾವ ದಾಖಲೆಗಳನ್ನು ನೋಡಿ ನಾನು ನಾಗಯ್ಯ ಮತ್ತು ಶಿವಮ್ಮ ಇವರೇ ಎಂದು ಗುರುತಿಸಿದ್ದೆ ಎಂದರೆ ಸಾಕ್ಷಿಯು ಗಂಡ ಹೆಂಡತಿ ಬಂದಿದ್ದರು ಆದರೆ ದಾಖಲೆಗಳನ್ನು ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ 3 ಷರಾ ಕ್ಕೆ ನಾಗಯ್ಯ ಮತ್ತು ಶಿವಮ್ಮ ಸಹಿ ಮಾಡಿಲ್ಲ ಹಾಗೂ ವಾದಿಯೇ ಯಾರೋ ಇಬ್ಬರನ್ನು ಕರೆದುಕೊಂಡು ಬಂದು ನಾಗಯ್ಯ ಮತ್ತು

ಶಿವಮ್ಮ ಎಂದು ಸಹಿ ಮಾಡಿಸಿದ್ದು ಆ ವಿಚಾರ ನನಗೆ ಗೊತ್ತಿಲ್ಲ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗಳಾಗಿ ಸಹಿ ಮಾಡಿದವರ ಗುರುತಿನ ಬಗ್ಗೆ ದಾಖಲೆಗಳನ್ನು ನಾನು ನೋಡಿರಲಿಲ್ಲ. ಇದೇ ವ್ಯಕ್ತಿಗಳು ಷರಾಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ದಾಖಲೆಗಳನ್ನು ನೋಡದೆ ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ದಾಖಲೆಗಳನ್ನು ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ನನ್ನ ಬಳಿ ಬಂದಿರಲಿಲ್ಲ ಹಾಗೂ ವಾದಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.